## ಆತ್ಮಸಮರ್ಪಣೆ ಸುಳಾದಿ

ಅಣುವೆಂದು ನಿನ್ನನ್ನು ಘನವಾಗಿ ಸೂಚಿಸುವೆನೆ
ಅಣುವಲ್ಲ ಅಣುವಲ್ಲ ಅಬುಜೆನಲ್ಲ
ಘನವೆಂದು ನಿನ್ನ ನಾನು
ಅಣುಮಾತ್ರ ಅರ್ಚಿಸುವೆನೆ
ಘನವಲ್ಲ ಘನವಲ್ಲ ಘನಸದೃತ
ಅಣುವಲ್ಲ ಘನವಲ್ಲ ಗುಣಗಣನಿಲಯನೆ
ಏನೆಂಬೆ ನಿನ್ನ ಸೋಜಿಗವು ನೆಲೆಯಿಲ್ಲ
ಅನಿಮಿಷರೀಶ ನಿನ್ನ ಅನಿಮಿಷಗಣದವರು
ಎಣಿಸಿ ಗುಣಿಸಿ ಗುಣ ನೆನೆಗಾಣರೊ
ಮನುಜ ವನಜತನುಜ ಜೀವಾದಿಗಳ
ತನುವಿನೊಳಗೆ ಒಂದಿನವಗಲದೆ
ಧನವ ಕಾಯಿವ ಸರ್ಪನ ತೆರದಿ ನ-
ಮ್ಮನು ಪಾಲಿಸುವ ಕಾಸನು ಬೇಡದೆ
ಘನಮಹಿಮವಿಜಯವಿಠಲ
ಮುನಿನುತ ನಿನ್ನ ಅಣು-ಘನರೂಪಕಾಣೆನೊ ನಾನು ॥ 1 ॥

ಪುರುಷರ ಮೋಹಿಸುವ ಪರಮಸುಂದರದೇವ
ಪುರುಷೋತ್ತಮ ನೀನೆ ಪುರುಷಪ್ರಧಾನನೆ
ಪುರುಷನು ನೀನೆ ಪುರುಷಬೀಜನು ನೀನೆ
ಪುರಾಣದಲ್ಲಿ ಪರಿಪೂರ್ಣಮಯ ನೀನೆ
ಪುರಾರಿ ಪುರಂದರ ಪುರುಷಾರ್ಥವ ನೀವ
ಪುರುಷಮೃಗವ ತಂದ ಪುರುಷನ ಪ್ರಾಣ, ಕಿಂ-
ಪುರುಷವಂದಿತ ಪಾದ ವಿಜಯವಿಠ್ಠಲ
ಪರಮಪುರಾತನೆ ಪುರುಷರೂಪತ್ರಯನೆ ॥

ಅಡವಿ ತುಲಸಿ, ಲತೆ ಗಿಡ ಕುಸುಮ ನಿನ್ನ
ಅಡಿಗೇರಿಸುವೆನಯ್ಯಾ ನುಡಿ ಮಂತ್ರಗಳಿಂದ
ಬಿಡದೆ ತಿರುಗುವ ರವಿ ಕಡಲಸುತನು ದೀಪ
ಒಡೆಯ, ತಾರೆಗಳು ನಿನಗಿಡುವ ಆಭರಣವು
ಬಡಿವಾಣವೆಲ್ಲ ಅಂಗಡಿಯ ಪದಾರ್ಥಗಳು
ಕೊಡುವ ಕೊಪ್ಪಗಳು ನಿನಗಿಡುವ ಕಾಣಿಕೆ ದೇವ
ಸುಡುವ ದಾವಾಗ್ನಿಯೆ ಕಡುತೇಜದಾರತಿ
ಅಡಿಗಡಿಗೆ ಸಂಶಯವಿಡಿಯದಲೆ ನಾನು
ಒಡನೊಡನೆ ಆವಾವ ಎಡಿಯಲ್ಲಿದ್ದವೆಲ್ಲ
ತಡೆಯದೆ ಮನದಲ್ಲಿ ಕೊಡುವೆನರ್ಪಿತವೆಂದು
ಕುಡುತೆಜಲಕೆ ಮುಕುತಿಕೊಡುವ ವಿಜಯವಿತಲ ॥ 3 ॥

ಅಟ್ಟತಾಳ : ಏಳುವಾಗಲಿ ಮುಗ್ಗಿಬೀಳುವಾಗಲಿ ಹರಟೆ
ಹೇಳುವಾಗಲಿ ವಾರ್ತೆಕೇಳುವಾಗಲಿ ದೇಶ-
ಆಳುವಾಗಲಿ ಸುಖ ಬಾಳುವಾಗಲಿ ನಿತ್ಯ

ವ್ಯಾಳೆಯಾಗಲಿ ಅವೇಳೆಯಾಗಲಿ ಮನ-
ದಾಲೋಚನೆಯೆಲ್ಲಿ ವಾಲಗ ಹರಿಯೆನ್ನಿ
ವೇಳೆಸವಿಯದರವೇಳೆಸವೆಯಲಿಲ್ಲ
ನಾಲಿಗೆಯಿಂದಲಿ ಪೇಳುವದಲ್ಲದೆ
ಆಲದೆಲೆಯಶಾಯಿ ವಿಜಯವಿತಲ ತಾಯಿ
ಲಾಲಿಸಿದಂತೆ ಮಾತಾಲಿಸಿಕೊಂಬ ॥ 4 ॥

ಆದಿತಾಳ ಎತ್ತಣ ಸಮರ್ಪಣೆ ಎತ್ತಣ ಸಮರ್ಪಣೆಂದು
ಎತ್ತಲಿದ್ದ ಹರಿಯು ಎತ್ತ ತೃಪ್ತನಾಹನೆಂದು
ಚಿತ್ತದಲ್ಲಿ ಭೇದಗೊಂಡು ತತ್ತಳಗೊಂಬುವದಲ್ಲ
ನಿತ್ಯ ಭಕ್ತಿಯಿಲ್ಲದವನು ಹತ್ತಿಲ್ಲಿ ಪದಾರ್ಥವೆಲ್ಲ
ಜತ್ತಾಗಿರಿಸಿಕೊಂಡು ಸುತ್ತ ಸಮರ್ಪಣೆಯೆಂದು
ಇತ್ತು ನಲಿದಾಡಿದರೆ ಉತ್ತಮಶ್ಲೋಕನು ಒಪ್ಪ
ಚಿತ್ತ ಶುದ್ಧನಾಗಿ ಕರವೆತ್ತಿ ಬಲುದೀಪನಾಗಿ
ಅತ್ತಲಿದ್ದ ಉದಕವು ಅತ್ತಲರ್ಪಿತವೆನಲು
ಚಿತ್ತ ಜಪಿತನು ಮೆಚ್ಚಿ ಚಿತ್ತದಲ್ಲಿ ಒಪ್ಪಿಕೊಂಡು
ಹತ್ತಕ್ಕೆ ನೂರಾರುಮಡಿ ಬಿತ್ತಿ ಬೆಳಸಿ ಉಣಿಸುವ
ಇತ್ತ ಬರುವ ಭವದೂರವಿಜಯವಿಠ್ಠಲರೇಯ
ಎತ್ತಲಾದರೇನು ತನ್ನ ಭೃತ್ಯನೆಂದರೊಡಂಬಡುವ ॥ 5 ॥